**ಓ.ಎಸ್. ನಂಃ 166/2020**

**ಪಿ.ಡಬ್ಲ್ಯೂಃ 1**

**ದಿನಾಂಕ 08.01.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಎಲ್.ವಿ.ಆರ್ ವಕೀಲರಿಂದಃ**

1. ನನ್ನ ತಂದೆಯಾದ ಲಕ್ಷ್ಮೇಗೌಡರಿಗೆ ಒಟ್ಟು 5 ಜನ ಮಕ್ಕಳು. ಅವರ ಹೆಸರು ಸುಗುಣ, ಶೀಲಾ, ಆನಂದ, 1 ನೇ ವಾದಿಯಾದ ದಿನೇಶ ಮತ್ತು ಕೃಷ್ಣಪ್ಪ ಅಂತ ಇರುತ್ತದೆ. ನನ್ನ ಸಹೋದರಿಯರಾದ ಸುಗುಣ, ಶೀಲಾ ಮತ್ತು ನನ್ನ ಸಹೋದರನಾದ ಆನಂದರವರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಹೋದರನಾದ ಆನಂದರವರು ಮರಣ ಹೊಂದಿದ್ದು, ಅವರ ಹೆಂಡತಿ ಮತ್ತು ಮಗಳನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ.

2. ಲಕ್ಷ್ಮೇಗೌಡರ ಆಸ್ತಿಗಳನ್ನೆಲ್ಲ ಅವರ 5 ಜನ ಮಕ್ಕಳು ಸೇರಿ ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ. ಸರ್ವೆ ನಂಬರ್ 20 ರ ಒಟ್ಟು ವಿಸ್ತೀರ್ಣ 6 ಎಕರೆ 21 ಗುಂಟೆ ಇರುತ್ತದೆ. ಸರ್ವೆ ನಂಬರ್ 20 ರ 6 ಎಕರೆ 21 ಗುಂಟೆ ಜಮೀನನ್ನು ನನ್ನ ತಂದೆಯಾದ ಲಕ್ಷ್ಮೇಗೌಡರು ಮತ್ತು ಅವರ 4 ಜನ ಸಹೋದರರು ಸೇರಿ 1969 ರಲ್ಲಿ ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ. ನನ್ನ ತಂದೆಯ ತಂದೆ ಅಂದರೆ ನನ್ನ ತಾತನ ಹೆಸರು ಲಕ್ಕಿಗೌಡ ಅಂತ ಇದ್ದು, ಅವರ ಹೆಂಡತಿಯ ಹೆಸರು ಹೊಂಬಮ್ಮ ಅಂತ ಇರುತ್ತದೆ.

3. ಸರ್ವೆ ನಂಬರ್ 20 ರ 6 ಎಕರೆ 21 ಗುಂಟೆ ಜಮೀನನ್ನು ನನ್ನ ತಂದೆಯಾದ ಲಕ್ಷ್ಮೇಗೌಡರು ಮತ್ತು ಅವರ 4 ಜನ ಸಹೋದರರು ನನ್ನ ಅಜ್ಜ ಅಜ್ಜಿಯಾದ ಲಕ್ಕಿಗೌಡ ಮತ್ತು ಹೊಂಬಮ್ಮರವರ ಮರಣದ ನಂತರ ಪಾಲುವಿಭಜನೆ ಮಾಡಿರುತ್ತಾರೆ. 1 ರಿಂದ 7 ನೇ ಪ್ರತಿವಾದಿಯರ ತಂದೆಯಾದ ಅಪ್ಪೇಗೌಡರು ನನ್ನ ತಂದೆಯಾದ ಲಕ್ಷ್ಮೇಗೌಡರ ಖಾಸ ಅಣ್ಣ ಎಂದರೆ ಸರಿ. ನನ್ನ ತಾತನಾದ ಲಕ್ಕೀಗೌಡರಿಗೆ ನನ್ನ ತಂದೆಯಾದ ಲಕ್ಷ್ಮೇಗೌಡ, 1 ರಿಂದ 7 ನೇ ಪ್ರತಿವಾದಿಯರ ತಂದೆಯಾದ ಅಪ್ಪೇಗೌಡ,

ಎಸ್.ಎಲ್.ಮರೀಗೌಡ, ಕರೀಗೌಡ, ಎಸ್.ಎಲ್.ಶಿವಣ್ಣ ಎನ್ನುವ 5 ಜನ ಮಕ್ಕಳಿದ್ದರು ಎಂದರೆ ಸರಿ. ಸರ್ವೆ ನಂಬರ್ 20 ರ 6 ಎಕರೆ 31 ಗುಂಟೆ ಜಮೀನು ಇದು ವಾದಿ ಮತ್ತು ಪ್ರತಿವಾದಿಯರ ಹಿರಿಯರ ಆಸ್ತಿ ಎಂದರೆ ಸರಿ.

4. ನಿಪಿ.1 ರ ವ್ಯವಸ್ಥಾ ಪತ್ರ ಮಾಡಿಸಿಕೊಡುವ ಪೂರ್ವದಲ್ಲಿ ದಾವಾ ಆಸ್ತಿಯನ್ನು ಅಳತೆ ಮಾಡಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 1964 ರಲ್ಲಿ ಆದ ಪಾಲು ವಿಭಜನೆಯ ಪ್ರಕಾರ ಲಕ್ಕೀಗೌಡರ 5 ಜನ ಮಕ್ಕಳಿಗೂ ಸರ್ವೆ ನಂಬರ್ 20 ರಲ್ಲಿ ತಲಾ 1 ಎಕರೆ 5 ಗುಂಟೆಯ ಜಮೀನು ಅವರವರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ. ಸದರಿ ಪಾಲುವಿಭಜನೆಯಲ್ಲಿ ಸರ್ವೆ ನಂಬರ್ 20 ರಲ್ಲಿ ತಮ್ಮ ಹಿಸ್ಸೆಗೆ ಬಂದ 1 ಎಕರೆ 5 ಗುಂಟೆ ಜಮೀನನ್ನು ಮರೀಗೌಡ ಬಿನ್ ಲಕ್ಕೀಗೌಡರು ಪ್ರತಿವಾದಿಯರ ತಾಯಿಯಾದ ಲಕ್ಷ್ಮಮ್ಮ ಕೋಂ ಅಪ್ಪೇಗೌಡರಿಗೆ ದಿಃ 22.07.1969 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**